ನಮ್ಮನೆ' ಎಂದರು. ಅವನು ತಟಸ್ಥ ನಿಂತೇ ಇದ್ದ. 'ನಾನ್ಯಾರು ಗೊತ್ತಾಯ್ತೊ' ಎಂದರು. 'ಜನಾರ್ದನ, ಎಲ್ರೂ ಇದೇ ನಮ್ನಿ ಕೇಳ್ತ್ರಪ್ಪ, ಮಳ್ ಮಳ್ಳು...' ಎಂದವನೆ ಆಡಿದ ಮಾತು ತನಗೆ ಸಂಬಂಧವೇ ಇಲ್ಲ ಎನ್ನುವಂತೆ ಗಂಭೀರ ಮುಖಮುದ್ರೆಯಲ್ಲಿ ಚಿಟ್ಟೆಗೆ ಒರಗಿದ. 'ಪ್ರಭುಗಳು... ಗಂಜಿಗೆ ಅವಲಕ್ಕಿ... ಹೊದ್ಲು...' ಮಾಸ್ತರು ಚಡಪಡಿಸಿದರು. 'ಪಾಪ... ಎಷ್ಟು ದಿನಾ ಆಯ್ತು ಹೀಗಾಗಿ? ಪಾಪ, ಅಲಾ' ಎಂದು ಲೊಚಗುಟ್ಟಿ ಅವರು ಅಕ್ಕಿ ಖರೀದಿಸಲು ಬಂದ ಗಿರಾಕಿಯ ಜತೆಗೆ ಮಬ್ಬು, ದೂಳಿನ ಗಿರಣಿಯ ಒಳಗೆ ನಡೆದರು.

ಕಿಂಚಿತ್ತೂ ಬದಲಾಗದ ಜನಾರ್ದನನ ಖಿನ್ನತೆ, ಮಂಕುತನದಿಂದ ಬೇಸರ ಪಟ್ಟ ಮಾಸ್ತರರು ರಸ್ತೆಯ ಏರಿನಲ್ಲಿ ಸೈಕಲ್ ದೂಡುತ್ತ ನಡೆದರು. ನಡುನಡುವೆ ಅವನು ಮಂತ್ರ ಪಠಿಸುವಂತೆ 'ಪರ್ವತೇಶ್ವರ' ಎಂದು ಸ್ವಗತಿಸುತ್ತಿದ್ದುದು ಕೇಳುತ್ತಿತ್ತು. ಹಣಕಿ ಹೆಜ್ಜೆ ಹಾಕುತ್ತಿದ್ದ ಜನಾರ್ದನನ ಅತಿಯಾದ ವಿಧೇಯತೆಗೆ ಅವರು ವಿಚಲಿತರಾಗಿದ್ದರು. ಊರೆಲ್ಲ ಸುತ್ತಾಡಿಸಿ ಅವನ ಮನೋರೋಗವನ್ನು ಪ್ರಚಾರ ಮಾಡಿದ ಅಪರಾಧಿ ಭಾವ ಅವರನ್ನು ಕಾಡುತ್ತಿತ್ತು. ಕಟ್ಟೆಮನೆಯ ಚಾಚು ಮಂಚದಲ್ಲಿ ಕೂತಿದ್ದ ಶ್ರೀಪತಿಗೆ ಮಾಸ್ತರರು ಸಂತಸದ ಸುದ್ದಿ ತರುತ್ತಾರೆಂಬ ನಿರೀಕ್ಷೆಯಿರಲಿಲ್ಲ. ಮಾಸ್ತರರು ತುಟಿ ಬಿಚ್ಚದೆ ವಾಚನಾಲಯ ಸೇರಿದರು. ಜನಾರ್ದನ ಜಗಲಿಯಲ್ಲಿ ನಿಂತು ಅತ್ತಿತ್ತ ನೋಡಿದ. ಮಲಗುವ ಕೋಣೆ ಹುಡುಕುತ್ತಿದ್ದ ಚಲನವಲನ ಎಂದು ಯಮುನಕ್ಕ ಮನಗಂಡು ಮಂಚಕ್ಕೆ ಬಿಟ್ಟು ಬಂದಳು.

ವಾಚನಾಲಯದ ಮೂಲೆಯಲ್ಲಿ ಗಜಾನನ 'ಪರ್ವತೇಶ್ವರ' ಓದುತ್ತಿದ್ದ. 'ವಿಶ್ವಾಮಿತ್ರ ಎಷ್ಟೆಲ್ಲ ಕಷ್ಟಪಟ್ಟರು!' ತನಗೆ ತಾನೇ ಆಡಿಕೊಂಡ ಮಾತಿನಂತಿತ್ತು ಅವನ ಉದ್ಗಾರ. 'ಏನೂ ಪ್ರಯೋಜನವಾಗಲಿಲ್ಲ' ಎಂದು ಮಾಸ್ತರರು ಸನ್ನೆಯಲ್ಲೆ ತನ್ನ ನಿರಾಶೆ ಅಭಿನಯಿಸಿ ತೋರಿಸಿದರು. ತಕ್ಷಣ ಏನೋ ಹೊಳೆದು ಮಾಸ್ತರರು ಎದ್ದು ಹತ್ತಿರ ಬಂದು 'ಪರ್ವತೇಶ್ವರ ಸುತ್ತಾಡಿಸಿ ನೋಡಭೌದು' ಎಂದು ಸಲಹೆ ನೀಡಿದರು.

'ನಮಗೂ ಹಾಗೇ ಅನಿಸ್ತಾ ಉಂಟು. ಮೊದ್ಲು ಕಾದಂಬರಿ ಓದಿ ಅವ್ನ ಕಿವಿ ಮ್ಯಾಲೆ ಹಾಕ್ತೇನೆ.' ಗಜಾನನ ಮನೆಯಲ್ಲಿ ಮಾತುಕತೆ ನಡೆಸಿರಬಹುದೆಂದು ಮಾಸ್ತರರಿಗೆ ಅನಿಸಿತು.

ಗಜಾನನ ಮಂಚದ ಮೇಲೆ ಪುಸ್ತಕ ಹಿಡಿದು ಕುಳಿತು ಪಾರಾಯಣ ಒಪ್ಪಿಸುವಂತೆ ದೊಡ್ಡ ದನಿಯಲ್ಲಿ ಪ್ರಥಮ ಅಧ್ಯಾಯವನ್ನು ಓದಲು ಆರಂಭಿಸಿದ. ಜನಾರ್ದನ ಅವಧಾನಿ ಕಣ್ಮುಚ್ಚಿ ಗೋಡೆಗೊರಗಿ ಆಲಿಸಲು ತೊಡಗಿದ. ಅವನೊಳಗಿನ ಕಂಪನಕ್ಕೆ ಮುಚ್ಚಿದ ರೆಪ್ಪೆ ಸ್ಪಂದಿಸುತ್ತಿತ್ತು.

ವಾಚನಾಲಯದಿಂದ ವಾಪಸ್ಸಾಗುವವರಲ್ಲಿ ಕೆಲವರು ಕುತೂಹಲ ತಡೆಯಲಾರದೆ ಬಾಗಿಲಲ್ಲಿ ನಿಂತು ಗಜಾನನನ ಪಠಣ ಕೇಳಿ, 'ಕಾದಂಬರಿ ಮಾರಾಟಕ್ಕೆ ಸಿಗ್ತದೆಯೊ?' ಎಂದು ವಿಚಾರಿಸಿದರು. 'ಚಲೋ ಬರ್ದಿದ್ದಾರೆ. ಯಾವುದನ್ನು ಮುಚ್ಚುಮರೆ ಮಾಡ್ಲಿಲ್ಲ. ಯಾವುದೂ ಸುಳ್ಳಲ್ಲ ಹಾಂ. ಪರ್ವತೇಶ್ವರ ದೇವಸ್ಥಾನದಲ್ಲಿ ನಡೆದ ಘಟನೆಯ ವರ್ಣನೆ ಮಾತ್ರ ಕಣ್ಣಿಗೆ ಕಟ್ಟಾಂಗಿದೆ. ನಮ್ಮುಂದೆ ನಡೀತಾ ಇದೆ ಅನ್ಸಬೇಕು...' ಅವರ ಟೀಕೆ ಟಿಪ್ಪಣಿ ಕಾದಂಬರಿಯಲ್ಲಿ ನಿರೂಪಿತವಾದ ಪಾಂಡೇಶ್ವರ ಮತ್ತು ಹಿಡಂಬಿಯ ರತಿವಿಲಾಸದ ಪರೋಕ್ಷ ಉಲ್ಲೇಖ ಎಂಬುದರಲ್ಲಿ ಶ್ರೀಪತಿಗೆ ಸಂದೇಹವಿರಲಿಲ್ಲ. 'ಲೇಖಕರು ಅವರೇ ಅಲ್ಲ' ಎಂದೊಬ್ಬ ಕೇಳಿದ. ಅವರ್‍ಯಾರು ತಂದೆಯ ಮನುಷ್ಯಾವಸ್ಥೆಯನ್ನು ಗಮನಿಸಲಿಲ್ಲವೆಂದು ಶ್ರೀಪತಿಗೆ ಕೆಟ್ಟದೆನಿಸಿತು. ಗಂಡನ ಮರೆಗುಳಿಯನ್ನು ಜನ ಹುಚ್ಚೆಂದು ಊರಲ್ಲಿ ಪ್ರಚಾರ ಮಾಡಿದರೆ ಗತಿ ಏನಪ್ಪಾ ಎಂದು ಯಮುನಕ್ಕನಿಗೆ ಚಿಂತೆಯಾಯಿತು.

2

ಕುಮಟೆ ಪೇಟೆಯಿಂದ ಸಮುದ್ರ ಬೇಲೆಗೆ ಹೊರಟವರೆಲ್ಲ ರಸ್ತೆಯ ಪಕ್ಕದಲ್ಲಿರುವ ಹಳೆಯ ಬೃಹತ್ ಹಂಚಿನಮನೆಯನ್ನು ಹೊರಳಿ ನೋಡದೇ ಇರಲು ಸಾಧ್ಯವೇ ಇಲ್ಲ. ಎತ್ತರದ ಇಳಿಜಾರು ಮಾಡು, ಅದರ ಕೆಳಗಿನ ಹೂಬಳ್ಳಿ ಚಿತ್ರದ ಬಣ್ಣಗೆಟ್ಟ ನೀಲಿ ತಳಿಯ ಗಾಜಿನ ಗ್ಯಾಲರಿಯ ಅಟ್ಟದ ಸಾಲು, ಸಣ್ಣ ಕಿಟಕಿಗಳ ವಿಶಾಲವಾದ ಚಿರೆಗಲ್ಲಿನ ಹಾವಸೆಯ ಮಜಬೂತ್ ಗೋಡೆ, ದುಂಡು-ನುಣುಪು ಕುಸುರಿ ಕಂಬಗಳ ಕಟಾಂಜನದ ಜಗಲಿ, ಮೆಟ್ಟಿಲುಗಳಾಚೀಚೆ ವಿರಾಮದಲ್ಲಿ ಕೂತು ಒರಗಿಕೊಳ್ಳಲು ಕಟ್ಟಿರುವ ಕಲ್ಲಿನ ಚಾಚುಮಂಚ, ನಡುವೆ ಸದಾ ಮುಚ್ಚಿರುವ ದೇವಸ್ಥಾನದ ಶೃಂಗಾರ ಹೊಸ್ತಿಲ ಚೌಕಟ್ಟಿನಂತೆ ಕಾಣುವ ಗಂಭೀರ ಗತ್ತಿನ ಲೋಹದ ಮುಳ್ಳು ಚಕ್ರಹಿಡಿಕೆಯ ಬಾಗಿಲು, ಅಂಗಳದ